(ಈ) ವಿಷಯ :- <u>ಸರ್ಕಾರ ನೇಮಿಸಿದ ಅಕ್ರಮಮ ಸಕ್ರಮ ಸಮಿತಿಯವರು ರೈತರಿಗೆ ಮಂಜೂರು ಮಾಡಿರುವ ಗೋಮಾಳ ಜಮೀನುಗಳಿಗೆ ಹಕ್ಕು ಪತ್ರ ನೀಡದಿರುವ ಬಗ್ಗೆ ಹಾಗೂ ಸಾಗುವಳಿ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ.</u>

ಶ್ರೀ ಹೆಚ್.ಸಿ. ಬಾಲಕೃಷ್ಣ(ಮಾಗಡಿ) :- ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ನೇಮಿಸಿದ ಅಕ್ರಮ ಸಕ್ರಮ ಸಮಿತಿಯವರು ರೈತರಿಗೆ ಮಂಜೂರು ಮಾಡಿರುವ ಗೋಮಾಳ ಜಮೀನುಗಳಿಗೆ ಹಕ್ಕು ಪತ್ರ ನೀಡದಿರುವ ಬಗ್ಗೆ ಹಾಗೂ ಸಾಗುವಳಿ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ರೈತರು ಗೋಮಾಳ ಜಮೀನಿನಲ್ಲಿ ಅಕ್ರಮಣ ಮಾಡಿರುವಂತಹ ಪ್ರಕರಣ ಗಳಲ್ಲಿ ಅಕ್ರಮ ಸಕ್ರಮ ಸಮಿತಿಯವರು ರೈತರಿಗೆ ಮಂಜೂರು ಮಾಡಿರುವ ಜಮೀನಿಗೆ ಹಕ್ಕು ಪತ್ರ ನೀಡದಿರುವುದು ಹಾಗೂ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ರಾಜ್ಯ ಉಚ್ಚ ನ್ಯಾಯಾಲಯದಿಂದ ಹಿಂದೆ ಗೋಮಾಳ ಜಮೀನುಗಳ ಮಂಜೂರಾತಿಗೆ ನಿರ್ಬಂಧವಿದ್ದು, ಹಕ್ಕು ಪತ್ರಗಳು ನೀಡಲಾಗಿರುವುದಿಲ್ಲ. ತದನಂತರ ರಾಜ್ಯ ಉಚ್ಚ ನ್ಯಾಯಾಲಯವು ಗ್ರಾಮವಾರು ಗೋವುಗಳ ಸಂಖ್ಯೆಗೆ ಅಗತ್ಯವಿರುವ ಗೋಮಾಳವನ್ನು ಪರಿಗಣಿಸಿ, ಹೆಚ್ಚುವರಿ ಗೋಮಾಳ ಜಮೀನಿನಲ್ಲಿ ಸಕ್ರಮ ಮಾಡಲು ಅವಕಾಶವಾಗಿದ್ದು, ಇದರಂತೆ ಕ್ರಮ ಕೈಗೊಳ್ಳಲು ಸುತ್ತೋಲೆಯನ್ನು ಹೊರಡಿಸಲಾಗಿದೆ. ಇದಲ್ಲದೇ ಇಂತಹ ಜಮೀನು ಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರನ್ನು ಪ್ರಕರಣಗಳ ಇತ್ಯರ್ಥ ವಾಗುವವರೆಗೆ ಒಕ್ಕಲೆಬ್ಬಿಸದಂತೆಯೂ ಸೂಚನೆಯನ್ನು ನೀಡಲಾಗಿರುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :- ಸನ್ಮಾನ್ಯ ಉಪಾಧ್ಯಕ್ಷರೆ, ಅಕ್ರಮ ಮತ್ತು ಸಕ್ರಮ ಸಮಿತಿ ಜಮೀನನ್ನು ಮಂಜೂರು ಮಾಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ತಹಸೀಲ್ದಾರ್ ಮಾಹಿತಿ ಕೊಡುತ್ತಾರೆ. ಇವರು ನೀಡಿರುವ ಮಾಹಿತಿಯ ಆಧಾರದ ಮೇಲೆ ಅಕ್ರಮ ಮತ್ತು ಸಕ್ರಮ ಸಮಿತಿ ಮಂಜೂರು ಮಾಡಿದೆ. ಆ ಕಮಿಟಿ ಏಕಾಏಕಿ ಮಂಜೂರು ಮಾಡಿರತಕ್ಕಂಥದ್ದಲ್ಲ. ಭೂಮಿ ಮಂಜೂರಾದ ಮೇಲೆ ಸಂಬಂಧಪಟ್ಟಂಥ ರೈತರು ಅದಕ್ಕೆ ಕಿಮ್ಮತ್ತನ್ನು ಸಹ ಕಟ್ಟಿದ್ದಾರೆ. ಆದ್ದರಿಂದ,

ಅವರು ಉಳುಮೆ ಮಾಡಿಕೊಂಡಿರುವ ಜಮೀನನ್ನು ಈಗ ಬಿಡುಸುವುದಕ್ಕೆ ಆಗುವುದಿಲ್ಲ. ಈ ಜಮೀನುಗಳಿಗೆ ದಯಮಾಡಿ ಹಕ್ಕು ಪತ್ರವನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹೊಸದಾಗಿ ಮಂಜೂರಾದ ಜಮೀನಿಗಳನ್ನು ಬಿಟ್ಟು ಈಗಾಗಲೇ ಜಮೀನು ಮಂಜೂರು ಆಗಿದ್ದರೆ ಅಂಥ ಜಮೀನಿಗೆ ಹಕ್ಕು ಪತ್ರ ಕೊಡಿಸುತ್ತೇನೆಂದು ಮಾನ್ಯ ಸಭಾಧ್ಯಕ್ಷರು ಕಂದಾಯ ಸಚಿವರಾಗಿದ್ದಂಥ ಸಂದರ್ಭದಲ್ಲಿ ಇದೇ ಸದನದಲ್ಲಿ ಹೇಳಿದ್ದರು. ಇಲ್ಲಿ ಇನ್ನೊಂದು ವಿಷಯವನ್ನು ತಪ್ಪಾಗಿ ಅರ್ಥೈಸಲಾಗಿದೆ. ರೈತರಿಗೆ ಬಹಳ ವರ್ಷಗಳ ಹಿಂದೆ ಭೂಮಿ ಮಂಜೂರಾಗಿದೆ. ಹಿಂದೆ ಮಂಜೂರಾಗಿರತಕ್ಕಂಥ ಜಮೀನನ್ನು ಈಗ ಅರಣ್ಯ ಇಲಾಖೆಯವರು ಈ ಜಮೀನು ಅರಣ್ಯ ಇಲಾಖೆ ಬರುತ್ತದೆಂದು ಹೇಳಿ ಒಕ್ಕಲೆಬ್ಬಿಸುವಂತ ಕೆಲಸವನ್ನು ಮಾಡುತ್ತಿದ್ದಾರೆ. ಈ ಜಮೀನುಗಳು ಕಡು ಬಡವರು ಅಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾಗಿದೆ. ಅರಣ್ಯ ಇಲಾಖೆಯವರು ಸರ್ವೆ ಮಾಡಿ ಗೋಮಾಳ ಮತು ಅರಣ್ಯ ಇಲಾಖೆಯ ಜಮೀನು ಯಾವುದೆಂಬುದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಮತ್ತು ಕಂದಾಯ ಇಲಾಖೆಯವರು ವೈಜ್ಞಾನಿಕವಾಗಿ ಸರ್ವೆ ಮಾಡಿಲ್ಲ. ಸುಮ್ಮನೆ ಇಲ್ಲಿ ಕುಳಿತುಕೊಂಡು ಈ ಸರ್ವೆ ನಂಬರ್ ಎಲ್ಲ ಅರಣ್ಯ ಇಲಾಖೆಗೆ ಬರುತ್ತದೆಂದು ಬರೆದು ಕಳುಹಿಸಿದ್ದಾರೆ. ದಯಮಾಡಿ ಮತ್ತೆ ಸುಪ್ರೀ ಕೋರ್ಟ್‌ಗೆ affidavit ಹಾಕಿ ಮತ್ತೆ ವೈಜ್ಞಾನಿಕವಾಗಿ ಸರ್ವೆ ಮಾಡಿಸಿ. ಈಗ ರೈತರನ್ನು ಒಕ್ಕಲೆಬ್ಬಿಸುವುದನ್ನು ತಡೆಯಬೇಕು. ಈ ಜಮೀನುಗಳೆಲ್ಲಾ ಈಗಾಗಲೇ ಮಂಜೂರಾಗಿರುವಂಥದ್ದು. ಹೊಸದಾಗಿ ಮಂಜೂರಾಗಿರುವುದರ ಬಗ್ಗೆ ನಾನು ಕೇಳುತ್ತಿಲ್ಲ. ಹಿಂದಿನ ಸಮಿತಿ ಮಂಜೂರು ಮಾಡಿರತಕ್ಕಂಥ ಜಮೀನಿಗೆ ಕಿಮ್ಮತ್ತು ಕಟ್ಟಿದ್ದಾರೆ. ಆದ್ದರಿಂದ, ಅವರಿಗೆ ಹಕ್ಕು ಪತ್ರವನ್ನು ಕೊಡಿಸಬೇಕು. ಹೊಸದಾಗಿ ಮಾಡಿರುವ ಬಗ್ಗೆ ನೀವು ಏನು ಬೇಕಾದರು ಕ್ರಮ ತೆಗೆದುಕೊಳ್ಳಿ ಮತ್ತೆ ನಿಮ್ಮ ನ್ಯಾಯಾಲಯದ ಬಗ್ಗೆ ನಮ್ಮ ತಕರಾರು ಇಲ್ಲ. ಮಂಜೂರಾಗಿರುವ ಜಮೀನುಗಳಿಗೆ ದಯಮಾಡಿ ಹಕ್ಕುಪತ್ರ ಕೊಡುವುದಕ್ಕೆ ಆದೇಶ ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಉಪಾಧ್ಯಕ್ಷರೆ, ಇದು ಬರೀ ಮಾಗಡಿ ತಾಲ್ಲೂಕಿಗೆ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು ಅಲ್ಲ.1975 ರಲ್ಲಿ CCA act ಪ್ರಕಾರ ಕೆಲವೊಂದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಗೋಮಾಳ ಜಮೀನು ಇರಬಹುದು, C&I land ಇರಬಹುದು ಅಥವಾ ಯಾವುದೇ ಲ್ಯಾಂಡ್ ಇರಬಹುದು. ಈ ಲ್ಯಾಂಡ್‌ಗಳನ್ನು ಏನು ಮಾಡಿದ್ದಾರೆಂದರೆ, ಯಾವುದೇ ಸರ್ವೇ ಮಾಡದೆ ಅರಣ್ಯ ಇಲಾಖೆಗೆ ಅರಣ್ಯ ಬೆಳಸಲಿಕ್ಕೆ ಅದನ್ನು ಕೊಟ್ಟು ಬಿಟ್ಟಿದ್ದಾರೆ. ಒಂದು ತಾಲ್ಲೂಕಿನಲ್ಲಿ ಹೆಚ್ಚು ಕಡಿಮೆ 40 ಸಾವಿರ ಎಕರೆ ಇದ್ದರೆ 20 ಸಾವಿರ ಎಕರೆ ಜಮೀನನ್ನು ಅರಣ್ಯ ಬೆಳೆಸುವುದು ಎಂದು ಹೇಳಿ ಕೊಟ್ಟಿದ್ದಾರೆ. ಅರಣ್ಯ ಇಲಾಖೆಯವರು ಅಲ್ಲಿ ಅರಣ್ಯವನ್ನು ಬೆಳೆಸಿಲ್ಲ. ಆದರೆ ಪಾಣಿ ಮತ್ತು ಮುಟೇಶನ್‌ನಲ್ಲಿ ಅರಣ್ಯ ಇಲಾಖೆ ಎಂದು ಬಂದು ಬಿಟ್ಟಿದೆ.

ಉಪಾಧ್ಯಕ್ಷರು :- ಮಾಹಿತಿಗಾಗಿ ನಾನೇ ಹೇಳಿ ಬಿಡುತ್ತೇನೆ. ನಿಮ್ಮ ಪರವಾಗಿಯೇ ನಾನು ಹೇಳುತ್ತಿದ್ದೇನೆ. ಈ ಅರಣ್ಯ ಇಲಾಖೆಗೆ ಎಲ್ಲಾ ರೆವಿನ್ಯೂ ಲ್ಯಾಂಡ್‌ನ್ನು ಲ್ಯಾಂಡ್ ಗ್ರಾಂಟ್ ಮಾಡಬೇಕೆಂದು ಹೇಳಿ, 1993ರಲ್ಲಿ ಆದೇಶವನ್ನು ಮಾಡಿ ಸುಮಾರು ಎರಡೂವರೆ ಲಕ್ಷ ಹೆಕ್ಟೇರ್‌ನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ condition ಬಹಳ ಸ್ಪಷ್ಟವಾಗಿದೆ. ಯಾವುದೇ ಅರ್‌ಟಿಸಿಯನ್ನು change ಮಾಡಬಾರದು ಮತ್ತು ಕಂದಾಯ ಇಲಾಖೆಗೆ ಬೇಕಾದಾಗ ಅದನ್ನು ವಾಪಸ್ಸು ತೆಗೆದುಕೊಳ್ಳಬಹುದು ಎಂದು ಬಂದಿದೆ. ಇವತ್ತು ಅರಣ್ಯ ಇಲಾಖೆಯವರು ಅದನ್ನು ತಪ್ಪಾಗಿ ಅವರಿಗೆ Land Bank ಎಂದು ಮಾಡಿ ಕೊಟ್ಟರೆ ಆರ್‌ಟಿಸಿಯನ್ನು ಬದಲಾವಣೆ ಮಾಡಿದ್ದಾರೆ. ಬಹುಶ: ಈ ಬಗ್ಗೆ 2006ರಲ್ಲಿ ಒಂದು ಸರ್ಕಾರಿ ಆದೇಶವು ಕೂಡ ಆಗಿದೆ. ಆ ತರಹ ತಪ್ಪಾಗಿ ಅರ್‌ಟಿಸಿಗಳು ಆಗಿದ್ದರೆ ಅದನ್ನು ಮತ್ತೆ ಕಂದಾಯ ಇಲಾಖೆಯವರು ಆರ್‌ಟಿಸಿಯನ್ನು ಮಾಡಬೇಕೆಂದು ಸ್ಪಷ್ಟ ಆದೇಶಗಳು ಇದೆ. ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟಿನವರಿಗೆ ಪ್ರಮಾಣಪತ್ರವನ್ನು ಕೂಡ ಸಲ್ಲಿಸಿದ್ದಾರೆ. ಅರಣ್ಯ ಇಲಾಖೆಯ ಕಾರ್ಯದರ್ಶಿಗಳು ಯಾವುದಾದರೂ ಗೋಮಾಳ, all Revenue Landsನ್ನು deemed forest ನಿಂದ ತೆಗೆದಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳುವುದಿಲ್ಲವೆನ್ನುವಂತಹ ಸ್ಪಷ್ಟವಾದ ಮಾಹಿತಿ ಇದೆ. ಹಾಗಾಗಿ ಈ ರೀತಿಯಾದ ವ್ಯವಸ್ಥೆಯಿದೆ ಎಂದು ಹೇಳಿದ್ದಾರೆ. ನೀವು ಈ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಸಂಬಂಧಪಟ್ಟ ಇಲಾಖೆಯವರಿಗೆ ಕೊಡಿ. ಅದನ್ನು ಯಾವುದೇ ಕಾರಣಕ್ಕೆ ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುವಂತಹ ಅಧಿಕಾರ ಇಲ್ಲವೆಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್. ಸಿ. ಬಾಲಕೃಷ್ಣ :- ಆರ್‌ಟಿಸಿಯಲ್ಲಿ ಇವತ್ತಿಗೂ ಕೂಡ ಗೋಮಾಳ ಎಂದು ಇದೆ. ಅವರು ಇನ್ಯಾವುದೊ ಅದೇಶವನ್ನು ಹಿಡಿದುಕೊಂಡು ಅದು ನಮ್ಮದು ಎಂದು forest ಇಲಾಖೆಯವರು ಬಂದಿದ್ದಾರೆ. ಇವತ್ತಿಗೂ ಕೂಡ ಆರ್‌ಟಿಸಿಯಲ್ಲಿ ಗೋಮಾಳ ಎಂದು ಇದೆ. ಅವರು ಅದನ್ನು ಮಂಜೂರಾಗುವುದಕ್ಕಿಂತ ಮುಂಚೆ ಅದನ್ನು ಸರಿ ಮಾಡಿಕೊಳ್ಳಬೇಕಾಗಿತ್ತು. But ಈಗ ಆ ಕಾರಣದಲ್ಲಿ ರೈತರನ್ನು ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಜಾಸ್ತಿ ಇರುವವರನ್ನು ಅವರನ್ನು ಒಕ್ಕಲೆಬ್ಬಿಸಬಾರದು. ಮಂಜೂರಾಗಿರುವವರಿಗೆ ಹಕ್ಕುಪತ್ರಗಳನ್ನು ಸಹ ನೀಡಬೇಕು. ಇದು ನಮ್ಮ ಬೇಡಿಕೆಯಾಗಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಅಕ್ರಮಸಕ್ರಮ ಸಮಿತಿಯಲ್ಲಿ ನಾವು 54 ಮತ್ತು 53 ಮಾಡಿಬಿಟ್ಟು ಅವರಿಗೆ ಕಿಮ್ಮತ್ತನ್ನು ಕಟ್ಟಿಸಿಕೊಂಡು ಅವರಿಗೆ ನೋಟೀಸ್‌ನ್ನು ಕೊಟ್ಟಂತಹ ಸಂದರ್ಭದಲ್ಲಿ ಸುಪ್ರೀಂಕೋರ್ಟಿನ ಅದೇಶದ ಪ್ರಕಾರ ಅದನ್ನು ಕೊಡುವುದಕ್ಕೆ ಬರುವುದಿಲ್ಲವೆಂದು Revenue ಇಲಾಖೆಯವರು ಇವತ್ತಿನವರೆಗೂ ಅವರಿಗೆ ಹಕ್ಕುಪತ್ರವನ್ನು ಕೊಟ್ಟಿರುವುದಿಲ್ಲ. ಅವರನ್ನು ಒಕ್ಕಲೆಬ್ಬಿಸುವುದಕ್ಕೆ ಪ್ರಯತ್ನವನ್ನು ಮಾನ್ಯ ಜಿಲ್ಲಾಧಿಕಾರಿಯವರು ಮಾಡುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ ತಾವು ಈ ಬಗ್ಗೆ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಿ. ಆದರೆ ಮಾನ್ಯ ಮಂತ್ರಿಗಳು ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸರಿಯಾದ ಆದೇಶವನ್ನು ನೀಡುವುದರ ಮೂಲಕ ಏನು ಹಿಂದೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಕಂದಾಯ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅಕ್ರಮ ಸಕ್ರಮ ಸಮಿತಿಯಲ್ಲಿ ನಾವು ತೀರ್ಮಾನವನ್ನು ಮಾಡಿದ್ದೇವೆ. ಅವರಿಂದ ನಾವು ಕಿಮ್ಮತ್ತನ್ನು ಕಟ್ಟಿಸಿದ್ದೇವೆ. ಆ ಕಿಮ್ಮತ್ತಿನ ಪ್ರಕಾರ ಅವರಿಗೆ ಹಕ್ಕುಪತ್ರವನ್ನು ಕೊಟ್ಟು ಪಹಣಿಯಲ್ಲಿ ಅವರ ಹೆಸರು ಬರುವಹಾಗೆ ಮಾಡಿ ಮ್ಯುಟೇಶನ್‌ನಲ್ಲಿ ಅವರ ಹೆಸರು ಬರುವ ಹಾಗೆ ಮಾಡಿ ಸರ್ವೆ ಮಾಡಿಸುವುದರ ಮುಖಾಂತರ ಟಿಪ್ಪಣಿಯನ್ನು ಮಾಡಿಸಿದರೆ ಅವರಿಗೆ ಸ್ವಾಧೀನ ಬರುತ್ತದೆ.

ಶ್ರೀ ಗೋಪಾಲ ಭಂಡಾರಿ (ಕಾರ್ಕಳ) :- ಮಾನ್ಯ ಸದಸ್ಯರಾದ ಶ್ರೀ ಕೃಷ್ಣಮೂರ್ತಿಯವರು ಹೇಳಿದ ಹಾಗಿ ನಮ್ಮ ತಾಲ್ಲೂಕು ಹಾಗೂ ನಮ್ಮ ಜಿಲ್ಲೆಯಲ್ಲಿ ಆ ಸಮಸ್ಯೆಗಳು ಬಹಳಷ್ಟು ಗಂಭೀರವಾಗಿದೆ. ಅರಣ್ಯ ಇಲಾಖೆ ಎಂದು ಆರ್‌ಟಿಸಿಯಲ್ಲಿ ಎಲ್ಲೂ ಕೂಡ ನಮೂದಾಗಿರುವುದಿಲ್ಲ. ಸಂಪೂರ್ಣವಾಗಿ ಕಂದಾಯ ದಾಖಲೆಯಲ್ಲಿ ಕಂದಾಯ ಇಲಾಖೆಯಲ್ಲಿರುವಂತಹದ್ದನ್ನು ಆ ಬಗ್ಗೆ ಕಂದಾಯ ಇಲಾಖೆಯವರು ಹಕ್ಕುಪತ್ರವನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಹೆಚ್ಚುಕಡಿಮೆ 500 ಹಕ್ಕುಪತ್ರಗಳನ್ನು

ಚಾರಾ ಗ್ರಾಮದಲ್ಲಿ ಕೊಟ್ಟಿದ್ದಾರೆ. ನವೋದಯ ಶಾಲೆಗೆ ಚಾರಾ ಗ್ರಾಮದಲ್ಲಿ 50 ಎಕರೆ ಜಾಗವನ್ನು ಕೊಟ್ಟು ಅಲ್ಲಿ ಸುಮಾರು 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ. ಈಗ ಅರಣ್ಯ ಇಲಾಖೆಯವರು ಅದು ನಮ್ಮ ಜಾಗವೆಂದು ಹೇಳುತ್ತಿದ್ದಾರೆ ಇದು ಯಾವ ನ್ಯಾಯ? Forest ನಮ್ಮಲ್ಲಿ ಇದೆ, ಅವರದು ಎಂದು ಹೇಳುವುದಕ್ಕೆ ಒಂದು ತುಂಡು ದಾಖಲೆಯೂ ಸಹ ಅವರ ಹತ್ತಿರ ಇರುವುದಿಲ್ಲ. ಅರಣ್ಯ ಇಲಾಖೆಯಲ್ಲಿ ಸ್ವಲ್ಪ ದಾಖಲೆಯೂ ಕೂಡ ಇರುವುದಿಲ್ಲ. ಆದರೆ ಆ ಜಾಗ ನಮ್ಮದು ಎಂದು ಅವರು ಹೇಳುತ್ತಿದ್ದಾರೆ. ಸಂಪೂರ್ಣವಾಗಿ ಎಲ್ಲಾ ದಾಖಲಾತಿಗಳಲ್ಲಿ ಅದು ಕಂದಾಯ ಜಮೀನು ಎಂದು ಹೇಳುವುದು ನಮೂದಾಗಿರುತ್ತದೆ. ಆದರೂ ಕೂಡ ಸುಪ್ರೀಂಕೋರ್ಟಿನವರು ಬೇರೆಬೇರೆಯವರ ಹೆಸರುಗಳನ್ನು ಹೇಳಿಕೊಂಡು ಇದು ನಮ್ಮದು ಎಂದು ಹೇಳಿ ಆಕ್ಷೇಪಪತ್ರವನ್ನು ಕೊಡುತ್ತಿದ್ದಾರೆ. ಬೇರೆಬೇರೆ ಮನೆಗಳು ಮತ್ತು ಜನವಸತಿ ಇರುವಂತಹ ಜಾಗವನ್ನು ಕೂಡ ನಮ್ಮದು ಎಂದು ಹೇಳುವಂತಹ ಪರಿಸ್ಥಿತಿ ಇದೆ. ಕಾಡು ಎಂದು ಹೆಸರು ಇದ್ದರೆ, ನಮ್ಮಲ್ಲಿ ಕೆಲವು ಕಾಡುಗಳು ಇವೆ, ಆ ನಾಡಿಗೆ ಕಾಡು ಎಂದು ಹೆಸರು ಸಹ ಇದೆ. ನಮ್ಮಲ್ಲಿ ಕಾರ್ಕಳದಲ್ಲಿ ರಾಮಸಮುದ್ರದ ಕಾಡು ಕಾರ್ಕಳ ನಗರದಲ್ಲಿದೆ. ಆ ಕಾಡನ್ನು ನಮ್ಮದು ಎಂದು ಅವರು ಹೇಳುತ್ತಿದ್ದಾರೆ. ಅಲ್ಲಿ ಕಾಡು ಎಂದು ಹೆಸರು ಇದ್ದರೆ ಅದು ನಮ್ಮದು ಎಂದು ಹೇಳುವಂತಹ ಪರಿಸ್ಥಿತಿ ಇದೆ. ಬಹುಶ: ಕಾಡು ಎಂದು ಹೆಸರು ಇದ್ದರೆ ಬಹುಶ: ಪರಿಸರ ಪ್ರೇಮಿಗಳು ಮನೆಗೆ ಕಾಡು ಎಂದು ಹೆಸರನ್ನು ಇಟ್ಟುಕೊಂಡಿದ್ದಾರೆ ಅದು ನಮ್ಮದು ಎಂದು ಅವರು ಹೇಳುತ್ತಾರೆ. ದಯವಿಟ್ಟು ಇದರ ಬಗ್ಗೆ ಸ್ಪಷ್ಟವಾದಂತಹ ನಿರ್ದೇಶನವನ್ನು ಸರ್ಕಾರವು ಕೊಡಬೇಕಾಗುತ್ತದೆ. ಅರಣ್ಯ ಜಮೀನು ಯಾವುದು, ಕಂದಾಯ ಜಮೀನು ಯಾವುದು ಎಂದು ಹೇಳುವಂತಹದ್ದು. ಉದಾ:ಹೇಳುವುದಾದರೆ ಒಂದು ಸಾವಿರ ಎಕರೆ ಇರತಕ್ಕಂತಹ ಒಂದು ಸರ್ವೆ ನಂಬರ್‌ನಲ್ಲಿ 200 ಎಕರೆ ಅರಣ್ಯ ಇದ್ದರೆ ಇಡೀ ಒಂದು ಸಾವಿರ ಎಕರೆಯನ್ನು ನಮ್ಮದು ಎಂದು ಹೇಳಿ ಆಕ್ಷೇಪವನ್ನು ಮಾಡುವಂತಹ ಪರಿಸ್ಥಿತಿ ಬರುತ್ತದೆ. ದಯವಿಟ್ಟು ತಾವು ಈ ಬಗ್ಗೆ ಸ್ಪಷ್ಟವಾದಂತಹ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು :- ಮಾನ್ಯ ರಘುಪತಿಭಟ್‌ರವರೆ ತಾವು ಮಾತನಾಡಿ.

ಶ್ರೀ ಕೆ. ರಘುಪತಿಭಟ್ (ಉಡುಪಿ) :- ಮಾನ್ಯ ಉಪಾಧ್ಯಕ್ಷರೆ, ಈ ಸಮಸ್ಯೆಯು ನಮ್ಮ ಜಿಲ್ಲೆಯಲ್ಲಿಯೂ ಬಹಳಷ್ಟು ಇದೆ. ಈಗಾಗಲೇ ಮಾನ್ಯ ಗೋಪಾಲ ಭಂಡಾರಿಯವರು ಈ ಬಗ್ಗೆ ಹೇಳಿದ್ದರೆ.

ಉಪಾಧ್ಯಕ್ಷರು :- ಇಡೀ ರಾಜ್ಯದಲ್ಲಿ ಈ ಸಮಸ್ಯೆಯೂ ಇದೆ.

ಶ್ರೀ ಕೆ. ರಘುಪತಿಭಟ್ :- ನಮ್ಮಲ್ಲಿ ಏನಾಗಿದೆ ಎಂದರೆ, ರೆವಿನ್ಯೂ ಅಧಿಕಾರಿಗಳ ಸಮಸ್ಯೆಯೂ ಎಲ್ಲಿಗೆ ಬಂದು ತಲುಪಿದೆ ಎಂದರೆ ಯಾರೋ ಒಬ್ಬರು 15-20 ವರ್ಷಗಳ ಹಿಂದೆ ಮನೆಯನ್ನು ಕಟ್ಟಿಕೊಂಡಿದ್ದಾರೆ. ಅದ ಈಗ ಕಾಲೋನಿಯಾಗಿದೆ. ಅದು ರೇಕಾರ್ಡ್‌ನಲ್ಲಿ ವಿ.ಎ.ರವರು ಮಾಡಿರುವಂತಹ ತಪ್ಪಿನಿಂದ ಅದು ಪಂಚಾಯಿತಿ ಕಾಡು ಎಂದು ಎಂಟ್ರಿಯಾಗಿದೆ. ಹಿಂದೆ ಪಂಚಾಯಿತಿಯವರು ಒಂದು ವನಮಹೋತ್ಸವವನ್ನು ಮಾಡಿ ಅದನ್ನು ಕಾಡು ಎಂದು ಸುಮ್ಮನೆ ಎಂಟ್ರಿ ಮಾಡಿದ್ದಾರೆ. ಈಗ ಅಲ್ಲಿ ಮನೆಯನ್ನು ಕಟ್ಟಿಕೊಂಡು ಸುಮಾರು 20-25 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ನಮ್ಮ ರೆವಿನ್ಯೂ ಅಧಿಕಾರಿಗಳು ಅದಕ್ಕೆ ನಿಮ್ಮ ಎನ್‌ಓಸಿಯನ್ನು ಕೊಡಿ ಎಂದು ಅರಣ್ಯ ಇಲಾಖೆಯವರಿಗೆ ಕೊಡುತ್ತಾರೆ. ಅರಣ್ಯ ಇಲಾಖೆಯವರು ನೀವು ಕಾಡು ಎಂದು ಬರೆದರೆ ನಮಗೆ ರೆವಿನ್ಯೂ ಎಂದು ಕೊಡುವುದಕ್ಕಾಗುವುದಿಲ್ಲ. ನೀವು Reserve Forest ಇರಲಿ, Social Forestಇರಲಿ ಅದಕ್ಕೆ ಸುಪ್ರೀಂಕೋರ್ಟಿನಿಂದ ಅರ್ಡರ್ ಆಗಿದೆ. ಪಂಚಾಯಿತಿ ಕಾಡು ಎಂದು ಹೇಳಿದರೆ ಅದಕ್ಕೆ ಸಂಬಂಧವೇ ಇರುವುದಿಲ್ಲ. ಇವತ್ತು ತಾವು ಅಲ್ಲಿಯ ವಸ್ತುಸ್ಥಿತಿಯನ್ನು ಅಲ್ಲಿ ಹೋಗಿ ನೋಡಿದರೆ 20-25 ವರ್ಷಗಳಿಂದ ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಜನರು ವಾಸ ಮಾಡುತ್ತಿದ್ದಾರೆ. 94 (ಸಿ)ನಲ್ಲಿ ಅವರಿಗೆ ಮೂರು, ಐದು ಸೆನ್ಸ್ ಜಾಗವನ್ನು ಲ್ಯಾಂಡ್ ಗ್ರಾಂಟ್ ಮಾಡಬೇಕೆನ್ನುವುದಾದರೆ ಅವರಿಗೆ ಹಕ್ಕುಪತ್ರವನ್ನು ಕೊಡುವುದಕ್ಕಾಗುವುದಿಲ್ಲ. ರೆವಿನ್ಯೂ ಇಲಾಖೆಯಿಂದ ಅವರಿಗೆ ಒಂದು ಸ್ಪಷ್ಟವಾದಂತಹ ನಿರ್ದೇಶನ ಹೋಗಬೇಕು. Reserve Forest, Social Forest ಅದನ್ನು ಬಿಡಿ ಅದಕ್ಕೆ ಸುಪ್ರೀಂಕೋರ್ಟಿನ ಆದೇಶ ಇದೆ. ಈ ಪಂಚಾಯಿತಿ ಕಾಡು ಎಂದು ಹೇಳುವುದಕ್ಕೆ ಯಾವುದು ಇಲ್ಲ. ಅದು ವಿ.ಎ.ರವರು ಮಾಡಿರುವಂತಹ ತಪ್ಪಿನಿಂದ ಆಗಿದೆ. ವಸ್ತುಸ್ಥಿತಿಯನ್ನು ಅಲ್ಲಿ ಹೋಗಿ ನೋಡಿದರೆ ಅಲ್ಲಿ ಒಂದು ಮರವು ಹಾಗೂ ಗಿಡವೂ ಸಹ ಇರುವುದಿಲ್ಲ. ಅಂತಹ ಜಾಗದಲ್ಲಿ ಅವರು ಮನೆಯನ್ನು ಕಟ್ಟಿಕೊಂಡಿದ್ದಾರೆ. ಅಲ್ಲಿ ಇವರು ಪಂಚಾಯಿತಿ ಕಾಡನ್ನು ಮಾಡಿ ಸುಮಾರು ಒಂದು ಸಾವಿರ ಮನೆಗಳು ನಮ್ಮ ಜಿಲ್ಲೆಯಲ್ಲಿ ಇದೆ. ಪ್ರತಿ ಜಿಲ್ಲಾ ಪಂಚಾಯಿತಿ ಹಾಗೂ ಪ್ರತಿ ಗ್ರಾಮ ಪಂಚಾಯಿತಿ ಸಭೆಯಲ್ಲಿಯೂ ನಮಗೆ ಹಕ್ಕುಪತ್ರವನ್ನು ಕೊಡಿಸಿ ಎಂದು ಗಲಾಟೆಯಾಗುತ್ತದೆ, ಜನಸ್ಪಂದನ ಕಾರ್ಯಕ್ರಮಕ್ಕೂ ಹೋದಾಗಲೂ ಸಹ ನಮಗೆ ಹೆಚ್ಚು ಆ ಬಗ್ಗೆಯೇ ಬರುತ್ತದೆ. ಈ ಬಗ್ಗೆ ನಾನು ಏನು

ಹೇಳುತ್ತೇನೆಂದರೆ; Social Forest, Reserve Forest ಇದ್ದರೆ ಅಲ್ಲಿ ಸಮಸ್ಯೆಗಳು ಇರಬಹುದು. ಪಂಚಾಯಿತಿ ಕಾಡು ಎಂದು ಹೇಳುವಂತಹದ್ದು ಅಲ್ಲಿ ನಿಜವಾಗಿಯೂ ಕೂಡ ಅರಣ್ಯ ಇರುವುದಿಲ್ಲ. ಅದು ಅರಣ್ಯ ಇಲಾಖೆಯವರಿಗೆ ಸಂಬಂಧ ಇರುವುದಿಲ್ಲ. ಅವರು 94(ಸಿ)ಯಲ್ಲಿ ಅವರು ಅರ್ಜಿಯನ್ನು ಕೊಟ್ಟಿದ್ದಾರೆ. ಅವರು ಅಲ್ಲಿ ವಾಸ ಮಾಡುವ ಬಗ್ಗೆ ಸರಿಯಾಗಿ ರೆವಿನ್ಯೂ ಇಲಾಖೆಯಿಂದ ಒಂದು ಅದೇಶವು ಸಹ ಹೋಗಬೇಕೆಂದು ನನ್ನ request.

ಉಪಾಧ್ಯಕ್ಷರು :- ತಾವು ಹೇಳಿದ್ದೀರಿ.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ತಾವು ಈ ಬಗ್ಗೆ ಬಹಳಷ್ಟು ವಿಚಾರಗಳನ್ನು ತಿಳಿಸಿದ್ದೀರಿ. ಇವತ್ತು ಏನು ಇಡೀ ರಾಜ್ಯದಲ್ಲಿ ಮಾನ್ಯ ಸದಸ್ಯರು ಸಾಕಷ್ಟು ಮಂದಿ ಹೇಳಿದ್ದಾರೆ.. ನಿಮ್ಮದು ಅದೇ ವಿಚಾರ ಬೇರೆ ಏನು ಹೇಳುವುದು ಇಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) :- ಸನ್ಮಾನ್ಯ ಉಪಾಧ್ಯಕ್ಷರೆ,ಈಗ Forest, ಕೆರೆ ಮತ್ತು ಗೋಮಾಳ ಸ್ಫೋಟಗೊಳ್ಳುತ್ತಿರುವಂತಹ ಜನಸಂಖ್ಯೆಯ ದೃಷ್ಟಿ ಮತ್ತು ಪರಿಸರದ ರಕ್ಷಣೆಯಿಂದ ಸರ್ಕಾರ ಜನರ ರಕ್ಷಣೆಯನ್ನು ಮಾಡಬೇಕು. ಜನರ ರಕ್ಷಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಇಲ್ಲಿ ಕೋರ್ಟಿನ ಆದೇಶವನ್ನು ಮಾನ್ಯ ಕಂದಾಯ ಸಚಿವರು ಹೇಳಿದರು. ಇಲ್ಲಿ ಸಾಕಷ್ಟು ಗೋಮಾಳ extra ಇದ್ದರೆ ಅವರಿಗೆ ಕೊಡಬಹುದು ಎಂದು ಹೇಳಿದರು. ಅದರ ಬಗ್ಗೆ ನಾವು ಗಳು ಮಾತನಾಡುವಾಗ ಸರ್ಕಾರಿ ಜಾಗಗಳನ್ನು ಉಲ್ಲೇಖ ಮಾಡುವಾಗ ಅಲ್ಲಿ ಎಸ್ಸಿ:ಎಸ್ಟಿ ಜನರು ಇದ್ದಾರೆ. ಅದರ ಬಗ್ಗೆ ವೆರಿಫೈ ಮಾಡಿ ಅಲ್ಲಿ ಸಾರ್ವಜನಿಕ ಹಿತದೃಷ್ಟಿಗೆ ಬೇಕಾದಂತಹ ಜಾಗವನ್ನು ರಕ್ಷಣೆ ಮಾಡಿ ಪರಿಸರ ರಕ್ಷಣೆ ಮಾಡುವುದಕ್ಕೆ ಇಟ್ಟುಕೊಂಡು ಉಳಿದಂತಹವುಗಳು ಇದ್ದರೆ ಸರ್ಕಾರವು ಈ ಬಗ್ಗೆ ಒಂದು ನೀತಿಯನ್ನು ಘೋಷಣೆ ಮಾಡಿಕೊಂಡರೆ, ಏನು ಹೇಳಿದರೂ ಕೂಡ ಅದು ನೀತಿಯಾಗುತ್ತದೆ. ಈಗ ಅದನ್ನು ಕೊಟ್ಟರೆ ಕೆಲವು ಕಡೆ ಹೀಗಾಗುತ್ತದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದ ಗೋಮಾಳ ಇರಬಹುದು Forest Land ಇರಬಹದು, ಕೆರೆಗಳು ಸಹ ಇರಬಹುದು, ಅದರ ರಕ್ಷಣೆಯನ್ನು ಮಾಡುವುದು ಸರ್ಕಾರದ ಕರ್ತವ್ಯ ವಾಗಬೇಕು. ಅದನ್ನು ನಾನು ಸಾರ್ವಜನಿಕರ ದೃಷ್ಟಿಯಿಂದ ಮಾನ್ಯ ಕಂದಾಯ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಈಗಾಗಲೆ ಅಲ್ಲಿ ಉಳುಮೆ ಮಾಡುತ್ತಿದ್ದಾರೆ. ನಿಮ್ಮ ಉದ್ದೇಶವೇನು, ಗೋಮಾಳವೆಂದು ಗೋವುಗಳಿಗೆ ಆ ಜಾಗವನ್ನು ಬಿಡಬೇಕೆಂದು. ಅದನ್ನು ನಿಮ್ಮ ಕೈಯಲ್ಲಿ ಬಿಡಿಸುವುದಕ್ಕಾಗುವುದಿಲ್ಲ. ಅವನು ಆಗಲೇ ಉಳುಮೆಯನ್ನು ಮಾಡುತ್ತಿದ್ದಾನೆ. ಅವನಿಗೆ ಆ ಜಾಗವನ್ನು ಮಂಜೂರು ಮಾಡಿದ್ದೀರಿ, ಅವನು ಆ ಜಾಗಕ್ಕೆ ಕಿಮ್ಮತ್ತು ಸಹ ಕಟ್ಟಿದ್ದಾನೆ. ಅದನ್ನು ಆತನ ಕೈಯಿಂದ ಬಿಡಿಸುವುದಕ್ಕಾಗುತ್ತದೆಯೇ? ಇದರಲ್ಲಿ ಇನ್ನು ಗೊಂದಲಗಳು ಸೃಷ್ಟಿಯಾಗುತ್ತದೆ. ದಯಮಾಡಿ ತಾವು ಮುಂದಕ್ಕೆ ಮಂಜೂರು ಮಾಡುವುದು ಬೇಡ. ಮುಂದೆ ಯಾವುದೇ ಕಮಿಟಿಗಳು ಬೇಡ. ಆದರೆ ಈಗ ಕಿಮ್ಮತ್ತು ಕಟ್ಟಿರುವಂತಹದ್ದಕ್ಕೆ ದಯಮಾಡಿ ಹಕ್ಕುಪತ್ರಗಳನ್ನು ತಾವು ಕೊಡಬೇಕು. ಸನ್ಮಾನ್ಯ ಸಚಿವರಲ್ಲಿ ಇದು ನಮ್ಮ ಮನವಿ.

ಶ್ರೀ ಜಿ. ಕರುಣಾಕರರೆಡ್ಡಿ (ಮಾನ್ಯ ಕಂದಾಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ,ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣರವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚಿಗೆ ಇದ್ದಾರೆ. ಈ ಸರ್ಕಾರಕ್ಕೆ ಖಂಡಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹಾಗೂ ಹಿಂದುಳಿದ ವರ್ಗದವರ ಬಗ್ಗೆ ವಿಶೇಷ ಕಾಳಜಿ ಇದೆ. ಅದರ ಬಗ್ಗೆ ಎರಡನೆಯ ಪ್ರಶ್ನೆಯೇ ಇಲ್ಲ. ಇವತ್ತು ಮಾನ್ಯ ಸದಸ್ಯರೆಲ್ಲರೂ ಏನು ಪ್ರಸ್ತಾಪ ಮಾಡಿದ್ದಾರೆ. ಈ ಗೊಂದಲದ ಬಗ್ಗೆ ಏನು ಅರಣ್ಯ ಇಲಾಖೆಯವರು ನಮ್ಮದು ಎಂದು ಹೇಳಿ ಏನು ತೊಂದರೆಯನ್ನು ಕೊಟ್ಟಿದ್ದಾರೋ, ಈ ಬಗ್ಗೆ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಯೂ ಸೇರಿದಂತೆ ಒಂದು ಉನ್ನತ ಮಟ್ಟದ ಸಮಾವೇಶವನ್ನು ಮಾಡುತ್ತೇನೆ. ನಾನು ಸಹ ಒಂದು ಮೀಟಿಂಗ್‌ನ್ನು ಮಾಡುತ್ತೇನೆ. ಅದಕ್ಕೆ ಒಂದು clearanceನ್ನು ಮಾಡಿ ಈಗಾಗಲೇ ಏನು ಹಕ್ಕುಪತ್ರಗಳಿಗೆ ದುಡ್ಡನ್ನು ಕಟ್ಟಿಸಿಕೊಂಡು ಹಕ್ಕುಪತ್ರ ಕೊಡಲಿಲ್ಲವೆನ್ನುವಂತಹ ವಿಚಾರ ಮತ್ತು ಅವರನ್ನು ಮಾನ್ಯ ಸದಸ್ಯರಾದ ಶ್ರೀ ಬಾಲಕೃಷ್ಣರವರು ಏನು ಒಕ್ಕಲೆಬ್ಬಿಸುತ್ತಾರೆಂದು ಹೇಳಿದ್ದಾರೆ. ಅದನ್ನು ಮಾಡದ ಹಾಗೆ ನಾವು ಮಾಡೋಣ. ಅದು ಆದ ಮೇಲೆ ಇವತ್ತು ಕಂದಾಯ ಇಲಾಖೆಗೆ ಸೇರಬೇಕಾದಂತಹ ಜಮೀನು ಉಪಯೋಗಕ್ಕೆ ತಕ್ಕಂತೆ ಇರುವಂತಹ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ಇನ್ನು ಸಾಕಷ್ಟು ಜಿಲ್ಲೆಗಳಲ್ಲಿ ನಾನು ಜಿಲ್ಲಾಧಿಕಾರಿಗಳ ಸಭೆಯನ್ನು ನಡೆಸುವಂತಹ ಸಂದರ್ಭದಲ್ಲಿ ಅದರ ಬಗ್ಗೆ clear ಆಗಿ ಹೇಳಿದ್ದೇನೆ.

ಆ ರೀತಿಯಾಗಿದ್ದರೆ ಅದನ್ನು ವಾಪಸ್ಸು ತೆಗೆದುಕೊಂಡು, ಇದನ್ನು ಮಾಡಲೇಬೇಕೆಂದು ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಸಚಿವರು ದಯವಿಟ್ಟು ಈ ಬಗ್ಗೆ ಅರ್ಥಮಾಡಿಕೊಳ್ಳಬೇಕು. ಇದು ಒಂದಕ್ಕೊಂದು link ಆಗುವುದು ಬೇಡ. ಮೊದಲನೆಯದಾಗಿ ಮಂಜೂರಾಗಿ ಗೋಮಾಳವು forest ಎಂದು ಬಂದಿಲ್ಲ. ಇದು ಮಂಜೂರಾಗಿ ಈಗಾಗಲೇ ಕಿಮ್ಮತ್ತು ಕಟ್ಟಿರುವ ಬಗ್ಗೆ ಹಕ್ಕುಪತ್ರವನ್ನು ಕೊಡುವುದು ಒಂದು. ಇವತ್ತು ರೈತರನ್ನು forestನವರು ಒಕ್ಕಲೆಬ್ಬಿಸುತ್ತಿರುವುದು ಇದು ಎರಡನೆಯ ಪ್ರಶ್ನೆ. ಈಗ ಮಂಜೂರಾಗಿರುವುದು ಗೋಮಾಳ ಎಂದು ಇದೆ. ಅಲ್ಲಿ forest ಎಂದು ಇರುವುದಿಲ್ಲ. ರೈತರಿಗೆ ಮಂಜೂರಾಗಿದ್ದು ಅವರುಗಳು ಕಿಮ್ಮತ್ತನ್ನು ಕಟ್ಟಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹಾಗೂ ಎಲ್ಲರೂ ಇದ್ದಾರೆ. ಅದರಲ್ಲಿ ತಹಶೀಲ್ದಾರವರು ಕೂಡ ಆ ಸಮಿತಿಯ ಸದಸ್ಯರಾಗಿದ್ದಾರೆ. ಅವರ ವರದಿಯ ಮೇಲೆ ಮಂಜೂರಾತಿಯ ಹಕ್ಕುಪತ್ರವನ್ನು ಕೊಡಲಿ. Forestನವರು acquisition ಬಗ್ಗೆ ಅವರು ಏನು ಮೀಟಿಂಗ್ ಮಾಡುತ್ತೇವೆಂದು ಹೇಳಿದರು. ಅದು ಸ್ವಾಗತಾರ್ಹವಾದುದು ನಮ್ಮನ್ನು ಸಹ ಕರೆದರೆ ನಾವು ಸಹ ಕೆಲವು ಸಲಹೆಗಳನ್ನು ಕೊಡುತ್ತೇವೆ. ಈಗಾಗಲೇ ಒಂದು ಬಾರಿ ನಮ್ಮ District Ministerರವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್‌ನ್ನು ಸಹ ಮಾಡಿದ್ದೇವೆ. ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಅಧ್ಯಕ್ಷತೆಯಲ್ಲಿ forest ವಿಚಾರದ ಬಗ್ಗೆ ಒಂದು ಮೀಟಿಂಗ್ ಮಾಡಿದ್ದರು. ಅದು ಬೇರೆ ವಿಚಾರ. But ಈ ವಿಚಾರದಲ್ಲಿ ಮಾನ್ಯ ಸಚಿವರು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಗೋಮಾಳ ಎಂದು ಇರುವಂತಹ ಜಮೀನಿನಲ್ಲಿ ಕಿಮ್ಮತ್ತು ಕಟ್ಟಿರುವಂತಹವರಿಗೆ ಹಕ್ಕುಪತ್ರವನ್ನು ತಾವು ಕೊಡಬೇಕು. ದಯಮಾಡಿ ಅದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ :- ನಾನು ಅದರ ಬಗ್ಗೆ ಕ್ರಮವನ್ನು ವಹಿಸುವ ಬಗ್ಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ಬೇಗ ಮಾಡುವ ಬಗ್ಗೆ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ.